ಪರಿಸರ ಮತ್ತು ನೈರ್ಮಲ್ಯೀಕರಣ ಕಾಪಾಡುವ ದೃಷ್ಟಿಯಿಂದ ಸ್ವಚ್ಛ ಗ್ರಾಮ ಯೋಜನೆ

4974 - ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪರಿಸರ ಮತ್ತು ನೈರ್ಮಲ್ಯೀಕರಣ ಕಾಪಾಡುವ ದೃಷ್ಟಿಯಿಂದ "ಸ್ವಚ್ಛ ಗ್ರಾಮ ಯೋಜನೆ" ಜಾರಿಗೊಳಿಸಲು ಸರ್ಕಾರ ಯೋಚಿಸಿದೆಯೇ?

ಆ) ಈ ಯೋಜನೆಯಡಿ ಪ್ರತಿ ತಾಲ್ಲೂಕಿಗೆ ಎಷ್ಟು ಹಣ ವೆಚ್ಚ ಮಾಡಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವತಿಯಿಂದ ಸ್ವಚ್ಛ ಗ್ರಾಮ ಯೋಜನೆಯನ್ನು ರೂಪಿಸಲಾಗಿರುವುದಿಲ್ಲ.

ಆ) ಉತ್ತರ (ಅ)ದಿಂದಾಗಿ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಹೆದ್ದಾರಿಗಳು

4976 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳೆಷ್ಟು? ಈ ಹೆದ್ದಾರಿಗಳು ಎಷ್ಟು ಕಿ.ಮೀ.ವರೆಗೆ ಇರುತ್ತವೆ? (ವಿವರವಾಗಿ ಪಟ್ಟಿ ನೀಡುವುದು)

ಆ) ಈ ರಸ್ತೆಗಳನ್ನು ರಿಪೇರಿ ಮಾಡಲು ಕೈಗೊಂಡ ಕ್ರಮಗಳೇನು?

ಇ) ತರೀಕೆರೆಯಿಂದ ಹಾದಿಕೇರಿ ರಸ್ತೆ ಡಾಂಬರೀಕರಣ ಯಾವಾಗ ಪ್ರಾರಂಭವಾಗುತ್ತದೆ?

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 13 (ಹದಿಮೂರು) ರಾಷ್ಟ್ರೀಯ ಹೆದ್ದಾರಿಗಳಿದ್ದು ಇವುಗಳ ಒಟ್ಟು ಉದ್ದ 3728 ಕಿ.ಮೀ.ಗಳು. ವಿವರಗಳಿಗಾಗಿ ಪಟ್ಟಿ ಲಗತ್ತಿಸಿದೆ - ಅನುಬಂಧ 'ಎ'.

ಆ) ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚುವುದು ಶೋಲ್ಡರ್ಸ್‌ಗಳ ರಿಪೇರಿ ಮಾಡುವುದು ಇತ್ಯಾದಿ ಸಾಮಾನ್ಯ ದುರಸ್ತಿ ಕಾರ್ಯಗಳನ್ನು ಆಗಿಂದಾಗ್ಗೆ ಕೈಗೊಂಡು ಹೆದ್ದಾರಿಗಳನ್ನು ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿ ಇಡಲಾಗಿದೆ. ವಿಶೇಷ ದುರಸ್ತಿ ಹಾಗೂ ರೈಡಿಂಗ್ ಕ್ವಾಲಿಟಿ ಸುಧಾರಣೆ ಕಾಮಗಾರಿಗಳನ್ನು ಹಂತ ಹಂತವಾಗಿ ಭೂಸಾರಿಗೆ ಮಂತ್ರಾಲಯದ ಮಾರ್ಗಸೂಚಿಯನ್ವಯ ಮಾಡಲಾಗುತ್ತಿದೆ.

೨) ಈ ರಸ್ತೆಯ ಡಾಂಬರೀಕರಣ ಕಾಮಗಾರಿಯು ಜನವರಿ 2001ರಿಂದ ಪ್ರಾರಂಭಿಸಲಾಗುವುದು.

ಅಜ್ಜಂಪುರ ಮತ್ತು ಬೀರೂರುನಲ್ಲಿರುವ ಅಮೃತ್ ಮಹಲ್ ಕೇಂದ್ರಗಳ ಮೇವು ಉತ್ಪಾದನೆ

4977 - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಜ್ಜಂಪುರ ಮತ್ತು ಬೀರೂರುನಲ್ಲಿರುವ ಅಮೃತ್ ಮಹಲ್ ಕೇಂದ್ರಗಳಲ್ಲಿ 2000-2001ನೇ ಸಾಲಿನಲ್ಲಿ ಮೇ 7 ಉತ್ಪಾದನೆಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ?*

ಆ) *1999-2000 ಮತ್ತು 2000-2001ನೇ ಸಾಲಿನಲ್ಲಿ ಖರೀದಿ ಮಾಡಿದ ಮೇವಿನ ಪ್ರಮಾಣವೆಷ್ಟು? ಈ ಮೇವನ್ನು ಎಲ್ಲಿಂದ ಖರೀದಿ ಮಾಡಲಾಗಿದೆ? ಖರೀದಿಸಿದ ದರ ಎಷ್ಟು ಖರೀದಿಸಿದ ಮೇವು ಯಾವುದು?*

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಅಜ್ಜಂಪುರ ಕೇಂದ್ರ ರೂ. 60673-00

ಬೀರೂರು ಕೇಂದ್ರ ರೂ. 41595-00

ಒಟ್ಟು ರೂ. 102268-00

ಆ) 1999-2000 ಜೋಳದ ಕಡಬಿ 135 ಟನ್

2000-2001 ರಾಗಿ ಹುಲ್ಲು 33 ಟನ್

ಗುತ್ತಿಗೆದಾರರಿಂದ ಖರೀದಿಸಲಾಗಿದೆ.

ಜೋಳದ ಕಡಬಿ ಟನ್ 1ಕ್ಕೆ ರೂ. 995-00

ರಾಗಿಹುಲ್ಲು ಟನ್ 1ಕ್ಕೆ ರೂ. 1,450-00

ಬಾಗಲಕೋಟೆಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ವಿತರಣೆ

4979 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯೋತ್ಸವ ಪ್ರಶಸ್ತಿ ನೀಡುವಲ್ಲಿ ಬಾಗಲಕೋಟೆ ಜಿಲ್ಲೆಯ ಪ್ರತಿಭಾನ್ವಿತ ಕಲಾವಿದರನ್ನು ನಿರ್ಲಕ್ಷ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*